Reg No B G 155 11 — 5 — 72

55th Year of Publication ‘Satyavadi’ daily, Mysore 4

In the Sta'e – The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಖರಸ್ತೇದಾರ್ ಎಂ.ವಿ ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಹುಬ್ಬಳ್ಳಿ ಪುರಸಭಾ ಕಮೀಷನರ್‌ರವರಿಗೆ ಘೇರಾವ್

ಕಮಿಷನರರ ಘೇರಾವೋ

ಹುಬ್ಬಳ್ಳಿ— ನೀರು ಸರಬರಾಜಿನಲ್ಲಿ ತಮಗೆ ಆಗುತ್ತಿರುವ ನಿರಂತರ ಕಷ್ಟವನ್ನು ಮನಿಸಿಪಲ್ ಕಮಿಷನರವರಿಗೆ ಮಂದಟ್ಟು ಮಾಡಲು ನೂರು ಮಂದಿ ಪುರುಷರೂ ಸ್ತ್ರೀಯರೂ ಅವರನ್ನು ಘೇರಾವೋ ಮಾಡಿದ್ದರು – ವಿಷಯವನ್ನು ತಾವು ಖುದ್ದಾಗಿ ಪರಿಶೀಲಿಸುವುದಾಗಿ ಕಮಿಷನರರು ಭರವಸೆ ನೀಡಿದರು.

ನಗರಕ್ಕೆ ನೀರು ಸರಬರಾಜಿನ ಯೋಜನೆ

ಮೈಸೂರು— ಹೊಂಗಳ್ಳಿಯಲ್ಲಿ ಮೈಸೂರು ನಗರಕ್ಕೆ ನೀರು ಸರಬರಾಜಿನ ಯೋಜನೆಯ ಮೂರನೇ ಹಂತದ ಶಂಕುಸ್ಥಾಪನಾ ಸಮಾರಂಭವನ್ನು ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್‌ರವರು ನಿನ್ನೆ ದಿವಸ ನೆರವೇರಿಸಿದರು.

ಆರ್ ಎಸ್ ಎಸ್ ನಿಷೇಧಕ್ಕೆ ಕರೆ

ಜಯಪುರ— ರಾಜಸ್ತಾನ ಶಾಸನಸಭೆಯಲ್ಲಿ, ಕಾಂಗ್ರೆಸ್ ಸದಸ್ಯರು, ರಾಷ್ಟ್ರೀಯ ಸ್ವಯಂಸೇವಕ ಸಂಘವು ಕೋಮುವಾರು ಸಂಸ್ಥೆಯೆಂದೂ, ಅದನ್ನು ಪ್ರತಿಬಂಧಿಸಬೇಕೆಂದು ಹೇಳಿದಾಗ ಸಭೆಯಲ್ಲಿ ತುಂಬಾ ಗೊಂದಲವಾಯಿತು ; ಜನಸಂಘವು ತೀವ್ರ ಪ್ರತಿಭಟಿಸಿತು.

ಶಾಸನಸಭೆಯಲ್ಲಿ ಗೊಂದಲ ಹುಡುಗಿಯರ ಮಾರಾಟ

ಸಿಂಗಪುರ—“ಗುಲಾಮರ ವ್ಯಾಪಾರ”ದ ಒಂದು ಇಂಡೋನೇಷಿಯಾ ಕೂಟವು ಇಲ್ಲಿ ಗುಟ್ಟಾಗಿ ಬೆಳೆಯುತ್ತಿರುವ ಸ್ಥಳದಲ್ಲಿ ಚಿಕ್ಕ ವಯಸ್ಸಿನ ಮತ್ತಿತರ ಮಹಿಳೆಯರನ್ನು ಹರಾಜುಹಾಕುತ್ತಿರುವದಾಗಿ ಸ್ಥಳೀಯ ಪತ್ರಿಕೆಯೊಂದು ಪ್ರಕಟಿಸಿದೆ.

100,000th MOTOR CYCLE
RELEASED

IDEAL JAWA (INDIA) PRIVATE LIMITED
MYSORE – 2

ಐಡಿಯಲ್ ಜಾವಾದ ಮಹೋನ್ನತ ಸಾಧನೆ

100000 ದ ನೋಟಾರು ಸೈಕಲ್

ಮೈಸೂರು— ಜಾವಾ ಕಂಪೆನಿಯ ಲಕ್ಷದ ಮೋಟಾರು ಸೈಕಲ್ ಬಿಡುಗಡೆಯ ಸಮಾರಂಭದಲ್ಲಿ ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್ ರವರು ಅಧ್ಯಕ್ಷತೆ ವಹಿಸಿದ್ದರು; ಕೈಗಾರಿಕೆ ಮಂತ್ರಿ ಶ್ರೀ ಎಸ್. ಎಂ. ಕೃಷ್ಣರವರು ಬಿಡುಗಡೆ ಮಾಡಿದರು.

ಮುಖ್ಯ ಮಂತ್ರಿಯವರು ಮಾತನಾಡುತ್ತಾ, ರಾಜ್ಯದಲ್ಲಿ ಘನತೆ ಹೊಂದಿರುವ ಕೈಗಾರಿಕೆ ಆಗಿ ಜಾವಾ ಸಂಸ್ಥೆಯನ್ನು ಸಂಸ್ಥಾಪಿಸಿದ ಶ್ರೀ ಇವಾನಿ ಹಾಗೂ ದಕ್ಷತೆಯಿಂದ ಕೆಲಸ ಮಾಡುತ್ತಿರುವ ಆಡಳಿತ ವರ್ಗವನ್ನು ಪ್ರಶಂಸಿಸಿದರು.

ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಎಫ್ ಕೆ ಇವಾನಿಯವರು ಸ್ವಾಗತಿಸಿದರು. ಜನರಲ್ ಮ್ಯಾನೇಜರ್ ಶ್ರೀ ಎಸ್. ಜಿ. ರಂಗಸ್ವಾಮಿಯವರು ಸಂದೇಶ ವಾಚನ ಮಾಡಿದರು. ಶ್ರೀ ಸ್ಪೋಷಿಂ ಇವಾನಿಯವರು ವಂದನಾರ್ಪಣೆ ಮಾಡಿದರು. ಬಿಡುಗಡೆಯಾದ 1 ಲಕ್ಷ ಸಂಖ್ಯೆಯ ಮೋಟಾರ್ ಸೈಕಲ್ ಬಿಕನೀರ್ ಹಂಚಿಕೆದಾರರಿಗೆ ದೊರೆಯಿತು.

●

ಚಿನ್ನದ ಬೆಲೆ

ಬೊಂಬಾಯಿ— ಚಿನ್ನದ ಬೆಲೆಯು ಎಂದೂ ಇಲ್ಲದ್ದಕ್ಕಿಂತ ಹೆಚ್ಚಿದೆ — 10 ಗ್ರಾಂ ಸ್ಟ್ಯಾಂಡರ್ಡ್ ಚಿನ್ನಕ್ಕೆ ರೂ 217 ಮತ್ತು 10 ತೊಲಗಳ ಚಿನ್ನದ ಗಟ್ಟಿಗೆ ರೂ 2500 / 2400 !

●

ಬೀಡಿ ಕಾರ್ಮಿಕರು

ಬೆಂಗಳೂರು— ದಕ್ಷಿಣ ಕರ್ನಾಟಕ ಜಿಲ್ಲೆಯ 85000 ಬೀಡಿ ಕಾರ್ಮಿಕರ ಪೈಕಿ 75000 ಮಂದಿ 3 ದಿನಗಳ ಮುಷ್ಕರವನ್ನು ಸೋಮವಾರ ಪ್ರಾರಂಭಿಸಿದರು — ಜ್ಞ 2,25 ಲಕ್ಷ ಬೀಡಿ ಕಾರ್ಮಿಕರು, ಬೀಡಿ ಸಿಗಾರ್ ಸ್ಥಳದ ಶಾಸನ ಜಾರಿಗೆ ತರಬೇಕೆಂದೂ, 1000 ಬೀಡಿ ಸುತ್ತುವದಕ್ಕೆ ರೂ ೫ ರಿಂದ 4 ಕ್ಕೆ ಹೆಚ್ಚಿಸಬೇಕೆಂದೂ ಒತ್ತಾಯ ಮಾಡುತ್ತಿರುವರು.

★

ಖಂಡನೆ

ನವದೆಹಲಿ — ಅಮೇರಿಕಾವು ವಿಯಟ್ನಾಂನಲ್ಲಿ ರೇವುಗಳ ಸುತ್ತ ಮೈನ್ ಹಾಕುವುದನ್ನು ಖಂಡಿಸಿ, ಇದು ಯುದ್ಧ ಹರಡುವ ಕಾರ್ಯವೆಂದು ವಿದೇಶಾಂಗ ವಿಚಾರದ ಮಂತ್ರಿ ಶ್ರೀ ಸ್ವರ್ಣಸಿಂಗ್‌ರು ಪಾರ್ಲಿಮೆಂಟಿನ ಎರಡು ಸಭೆಗಳಲ್ಲೂ ತಿಳಿಸಿದರು.

ಎರಡು ಪೋಸ್ಟುಗಳು ಹೋದವು

ನವದೆಹಲಿ— ಮೇ 5 ರಂದು ಪಾಕಿಸ್ತಾನ ಸೈನ್ಯಗಳು ಭಾರತ ಸೈನಿಕರ ಮೇಲೆ ಬಿದ್ದು, ಕಾಶ್ಮೀರದ ಟಿಟವಾಲಾ ಭಾಗದಲ್ಲಿನ ಎರಡು ಪೋಸ್ಟುಗಳನ್ನು ಆಕ್ರಮಿಸಿಕೊಂಡವೆಂದೂ, 24 ಭಾರತೀಯ ಸೈನಿಕರು ಸತ್ತು 56 ಮಂದಿ ಗಾಯಗೊಂಡರೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು.

○

ಸರಿಸಮಾನ

ಬೆಂಗಳೂರು — ಸರಕಾರವು ಎಲ್ಲಾ ಕೋಮುಗಳನ್ನೂ ಸರಿಸಮಾನವಾಗಿ ಕಾಣುತ್ತಿರುವುದೆಂದೂ, ಅಲ್ಪ ಸಂಖ್ಯಾತರು ತಮಗೆ ಕಷ್ಟವಾಗಿರುವದೆಂದು ತಿಳಿಯುವ ಆವಶ್ಯಕತೆ ಇಲ್ಲವೆಂದೂ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು, ತಮ್ಮ ಮೈತ್ರಿ ಮತ್ತು ಆಹಾರ ಸಚಿವೆ ಶ್ರೀಮತಿ ಈವಾ ವಾಜ್ ರವರ ಗೌರವಾರ್ಥ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ತಿಳಿಸಿದರು.

○

ಮತ್ತೊಂದು ವಿಶ್ವವಿದ್ಯಾಲಯ

ಬೆಂಗಳೂರು— ರಾಜ್ಯದ 3 ವಿಶ್ವವಿದ್ಯಾಲಯಗಳ ಉಪಕುಲಪತಿಗಳ ಸಭೆಯಲ್ಲಿ ಮತ್ತೊಂದು ವಿಶ್ವವಿದ್ಯಾನಿಲಯ ಸ್ಥಾಪನೆಯ ಆವಶ್ಯಕತೆ ಹೊರಪಟ್ಟಿದೆ.

★

ಮಿಲಿಟರಿ ಶಾಸನ

ಸೈಗಾನ್— ದಕ್ಷಿಣ ವಿಯಟ್ನಾಂ ಆದ್ಯಂತ ಮಿಲಿಟರಿ ಶಾಸನ ಜಾರಿಮಾಡಲಾಗಿದೆ.

○

ಅಬ್ಕಾರಿ ಉತ್ಪತ್ತಿ

ಮೈಸೂರು— 72–73 ರ ಮೈಸೂರು ಜಿಲ್ಲಾ ಅಬ್ಕಾರಿ ಸರಾಜುಗಳಲ್ಲಿ ಒಟ್ಟು ರೂ. 12395400 ದೊರೆತಿದೆ ; ಕಳೆದ ವರ್ಷ ರೂ. 9663000 ದೊರೆತಿತ್ತು.

★

ರಾಜ್ಯದ ಹೆಸರು

ಹುಬ್ಬಳ್ಳಿ— ರಾಜ್ಯದ ಹೆಸರನ್ನು ಬದಲಾಯಿಸಲು ಸರ್ಕಾರ ನಿರ್ಧರಿಸಿರುವದನ್ನು ಕರ್ನಾಟಕ ಕ್ರಾಂತಿಕೂಟ ಪ್ರಶಂಸಿಸಿದೆ.

★

ವನ್ಯಜೀವಿಗಳು

ನವದೆಹಲಿ— ದೇಶದಲ್ಲಿ ಕಡಮೆಗೊಳ್ಳುತ್ತಿರುವ ವನ್ಯಜೀವಿಗಳ ಬಗ್ಗೆ ಲೆಕ್ಕಿಸದಿರುವ ಯೋಜನೆ ಬಗ್ಗೆ ವನ್ಯಜೀವಿ ರಕ್ಷಣಾ ಸಮಿತಿಯ ಕಾರ್ಯಕಾರಿ ಸಮಿತಿ ಟೀಕಿಸಿದೆ

ವುಡ್‌ಲ್ಯಾಂಡ್ 12-5-72ರಿಂದ ಆಮೋಘ 2ನೇ ವಾರ

.... ಚಿತ್ರೋತ್ಕರ್ಷ ಕನ್ನಡ ಚಿತ್ರ ....

ಹೃದಯ ಸಂಗಮ

ಸಪ್ತಸ್ವರಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು: ಎಂ ಜೆ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು.

ಪ್ರತಿ ದಿನ ಬೆಳಿಗ್ಗೆ 11 ರಿಂದ 12 ಘಂಟೆವರೆಗೆ ಬಾಲ್ಕನಿ ತರಗತಿಗಳಿಗೆ ಮುಂಗಡ ಟಿಕೇಟು ಕೊಡಲಾಗುತ್ತೆ.

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ತುಂಬಿಹರಿಯುತ್ತಿದೆ

ಅಪೆರಾ 11-5-72 ರಿಂದ

.... ಮನಮೋಹಕ ಕನ್ನಡ ಚಿತ್ರ ....

ಭಲೇ ರಾಣಿ

ನಟವರ್ಗ— ಉದಯಕುಮಾರ್, ಶ್ರೀನಾಥ್, ಅಶ್ವತ್ಥ್, ದಿವಂಗತ ನಾಗಪ್ಪ
ಶಕ್ತಿಪ್ರಸಾದ್, ರಮೇಶ್, ತೂಗುದೀಪ ಶ್ರೀನಿವಾಸ್, ಪಂಡರೀಬಾಯಿ
ದೇವಿಕ, ರಮಾದೇವಿ, ಬೇಬಿ ರಾಣಿ, ಮೈಸೂರಿನ ಜೈ ॥ ಮೂಗ
ದಿನ 3 ಆಟಗಳು

SHAKTI
SUDHA

A Superb Tonic

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠವೆನ್ನುವದು ಸೊಕ್ಕಿನ' ಕಲ್ಪನೆ'
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

ಆನೆ - ಹುಡುಗ

Protect the Cow

Edited Printedand Published by Dharmapracharanirata
M S Krishna Rao (Propretor) at the Satyavadi Press
Chamarajapuram Mysore 4